**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.711/2017**

**CW- 3** **PW:4**

| | |
|---|---|
| ಸಾಕ್ಷಿಯ ಹೆಸರು | ಃ ಬಾಬುರಾವ್ ಖುಡೆ |
| ತಂದೆ /ಗಂಡನ ಹೆಸರು | ಃ ಕೃಷ್ಣಾಜಿ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ ಖಾಸಗಿ ಕೆಲಸ |
| ವಾಸಸ್ಥಳ | ಃ ನವನಗರ,ಹುಬ್ಬಳ್ಳಿ |

ದಿಃ **12.06.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ ಯಾವಾಗ ಮತ್ತು ಯಾವ ವಿಷಯಕ್ಕೆ ಸಂಬಂದಪಟ್ಟಂತೆ ಮಾಡಿದ್ದೇನೆ ಎಂದು ಈಗ ನನಗೆ ನೆನಪಿಲ್ಲಾ. ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ.

ಸಾಕ್ಷಿಯು ನಿಪಿ.2 ರಲ್ಲಿರುವ ಸಹಿಯನ್ನು ಗುರುತಿಸಿದ್ದು ಸದರಿ ನಿಪಿ.2 ದಾಖಲಾತಿ true copy ಇರುವುದರಿಂದ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದಾನೆ ಎಂದು ತೆಗೆದುಕೊಳ್ಳಲಾಯಿತು. ಸದರಿ ಸಹಿಯನ್ನು ಎಲ್ಲಿ ಮತ್ತು ಯಾವಾಗ ಮಾಡಿದ್ದೀರಿ ಎಂದರೆ ನನಗೆ ನೆನಪಿಲ್ಲಾ. ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ**

ದಿಃ 07-03-2012 ರಂದು ಮಧಾಹ್ನ 2-45 ರಿಂದ 3-45 ಗಂಟೆಯವರೆಗೆ ಅಮರಗೋಳದ ಕೆರಿ ಓಣಿಯಲ್ಲಿರುವ ಫಿರ್ಯಾದಿಯ ಮನೆಯೊಳಗೆ ನಿಮ್ಮನ್ನು ಕರೆದುಕೊಂಡು ಹೋಗಿ ಪ್ರಕರಣದ ಎಲ್ಲಾ ವಿಷಯ ತಿಳಿಸಿ ಪಂಚರನ್ನಾಗಿ ಬನ್ನಿ ಎಂದು ಕರೆದಿದ್ದಕ್ಕೆ ನೀವು ಹಾಜರಿದ್ದು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲಾ. ಆ ಸಮಯದಲ್ಲಿ ನಿಮ್ಮ ಜೊತೆ ಚಾಸಾ 2 ರವರು ಸಹ ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲಾ.

ಅದೇ ದಿನ ಮಧ್ಯಾಹ್ನ 1-45 ರಿಂದ 2-30 ರ ವರೆಗೆ ಚಾಸಾ 1 ರವರ ಮನೆಯೊಳಗಿರುವ ವಸ್ತುಗಳ ಮೇಲಿರುವ ಬೆರಳು ಮುದ್ರೆಯ ಸಾಕ್ಷ್ಯವನ್ನು ಕಲೆ ಹಾಕಿದ ಬಗ್ಗೆ ಪಂಚನಾಮೆ ಬರೆದಿದ್ದು ಆ ಸಮಯದಲ್ಲಿ ನೀವು ಹಾಜರಿದ್ದು ಅದಕ್ಕೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲಾ, ಆ ಸಮಯದಲ್ಲೂ ಸಹ ನನ್ನ ಜೊತೆ ಚಾಸಾ 2 ರವರು ಇದ್ದರು ಎಂದರೆ ಸರಿಯಲ್ಲಾ. ಈ ಎಲ್ಲಾ ವಿಷಯ ಗೊತ್ತಿದ್ದರೂ ಸಹ ನೀವು ಸ್ಥಳದಲ್ಲಿ ನಿಪಿ 1 ಮತ್ತು 2 ಕ್ಕೆ ಸಹಿ ಹಾಕಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲಾ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.